ಡಿ ಡಬ್ಲ್ಯೂಃ 1

ದಿನಾಂಕ 05-07-2021 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

ರಾಣೇಬೆನ್ನೂರಿನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಲಾದ ಅಸಲು ದಾವಾ ಸಂಖ್ಯೆ 137/2013 ರ ರಾಜಿ ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಡಿ 5 ಎಂದು, ರಾಣೇಬೆನ್ನೂರಿನ ಬಿನ್ ಶೇತ್ಕಿ ರಿ ಸ ನಂ.892 ಡ ನೇದ್ದರ ಪ್ಲಾಟ್ ನಂ.1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು (ಎರಡು ಹಾಳೆ) ಹಾಜರಪಡಿಸಿದ್ದು ಅದನ್ನು ನಿಡಿ 6 ಎಂದು, ರಾಣೇಬೆನ್ನೂರಿನ ಬಿನ್ ಶೇತ್ಕಿ ರಿ ಸ ನಂ.892 ಡ ನೇದ್ದರ ಪ್ಲಾಟ್ ನಂ.2 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು (ಎರಡು ಹಾಳೆ) ಹಾಜರಪಡಿಸಿದ್ದು ಅದನ್ನು ನಿಡಿ 7 ಎಂದು, ರಾಣೇಬೆನ್ನೂರು ನಗರಸಭೆಯವರು ನೀಡಿರುವ ರಿ ಸ ನಂ.892 ಡ ನೇದ್ದರ ಇ-ಸ್ವತ್ತು ಖಾತಾ ವಹಿಯನ್ನು ಹಾಜರಪಡಿಸಿದ್ದು ಅದನ್ನು ನಿಡಿ 8 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ. ನನ್ನ ಸಮಕ್ಷಮ

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.